ಅವನಿಗೆ ಆಶ್ಚರ್ಯ ಕಾದಿತ್ತು. ಅತ್ತ ಕಡೆಯಿಂದ ಜೂನಿಯರ್ ಸರ್ಕಾರ್ ಬಹಳ ಮೃದುವಾಗಿ ಮಾತಾಡಿದ.

'ಸಾರ್ ನಿಮಗೆ ತುಂಬಾ ತೊಂದರೆ ಕೊಟ್ಟಿದ್ದೀವಿ. ಇವತ್ತು ಮುಂಬೈಗೆ ಅರ್ಜೆಂಟ್ ಬರಬೇಕಾಯ್ತು. ಸಾಮಾನು ತೆಗೆದು ಹಾಕಲು ಬೆಳಿಗ್ಗೆನೇ ಬರ್ತೀನಿ ಅಂದಿದ್ದ ಜೆಸಿಬಿ ಡ್ರೈವರ್‌ನ ಅಮ್ಮ ತೀರೋಗಿ ಅವನಿಗೆ ಬರೋಕೆ ಆಗ್ತಿಲ್ವಂತೆ. ಸೋಮವಾರ ಮಾಡಿಸಿಕೊಡ್ತೀವಿ ಸರ್' ಅಂತ ಹೇಳಿದ.

'ಹೌದಾ? ಅಯ್ಯೋ ಪಾಪ. ಇಂತದ್ದೆಲ್ಲ ಆದಾಗ ಏನೂ ಮಾಡಕ್ಕಾಗಲ್ಲ. ನಾವೂ ವೀಕೆಂಡ್‌ಗೆ ಬೆಂಗ್ಳೂರಿಗೆ ಹೋಗ್ಬೇಕು ಸರ್, ಮಗಳು ಅಲ್ಲೇ ರಾಜಾಜಿನಗರದಲ್ಲೆ ಇದ್ದಾಳೆ' ಅಂತ ಮೂರ್ತಿ ತಣ್ಣಗಾಗಿ ಲೋಕಾಭಿರಾಮ ಮಾತಾಡಲು ಶುರುಮಾಡಿದ. ಗೀತಾಳಿಗೆ ಮೂರ್ತಿಯ ಈ ಪರಿ ಹೊಸದೇನಾಗಿರಲಿಲ್ಲ. ಅವಳು ಫೋನನ್ನು ತನಗೆ ನೀಡುವಂತೆ ಕೇಳಿದಳು. ತಗೊಂಡು, ಗತ್ತಿನ ಇಂಗ್ಲಿಷಿನಲ್ಲಿ ಸಂತಾಪ ಸೂಚಿಸಿದಳು. ಅಷ್ಟೇ ಮೆಲ್ಲಗೆ 'ಹೋಗ್ಲಿ ಬಿಡಿ ಸರ್... ಯಾರ ಜೆಸಿಬಿ ಆದ್ರೆ ಏನಂತೆ ನಮ್ದೇ ಕರೆಸ್ತೀವಿ. ನೀವು ಗಂಟೆಗೆ ಇಷ್ಟು ಅಂತ ಕೊಟ್ಬಿಡಿ, ಅಬ್ಬಬ್ಬಾ ಅಂದ್ರೆ ಮೂರು ಗಂಟೇಲಿ ನಿಮ್ಮ ಸಾಮಾನೆಲ್ಲ ನಿಮ್ಮ ಜಾಗಕ್ಕೇ ಹಾಕಿಸ್ತೀವಿ' ಅಂತ ಹೇಳಿದಳು.

'ಅಯ್ಯೋ ಹಾಗೇಲ್ಲ ಏನು ಬೇಡ ಮೇಡಂ. ನಿಮ್ಮ ಸೈಟೂ ನಮಗೇ ಮಾರ್ಬಿಡಿ, ನಾವೇ ತಗೋತೀವಿ. ಏನಂತೀರ?' ಅಂತ ಗಹಗಹಿಸಿ ನಕ್ಕ ಜೂನಿಯರ್, ನಿಮ್ಮ ಸೈಟು ಜುಜುಬಿಯದು ಎಂಬಂತೆ ಗೀತಾಳನ್ನು ಕಿಚಾಯಿಸಿದ.

'ಅದಕ್ಕೇನಂತೆ ಸರ್ ಇಪ್ಪತ್ತು ಕೋಟಿ... ಅಷ್ಟೆ. ಸೌತ್ ಫೇಸಿಂಗ್. ಜೊತೆಗೆ ಈ ಕಡೆ ತಲೆ ಹಾಕಿ ಮಲಗಿದವ್ರಿಗೆ ವಾಸ್ತು ಸರಿ ಬರಲ್ಲವಂತೆ, ಹತ್ತಿರ ಸ್ಮಶಾನ ಬೇರೆ ಇದೆಯಲ್ಲ. ಇರ್ಲಿ ಮಾತುಕತೆಗೆ ಇವತ್ತೇ ಕೂರೋಣ್ವ?' ಎಂದಳು. ಅಂತಹ ತಣ್ಣನೆ ಪ್ರತಿಕ್ರಿಯೆಯನ್ನು ಅವನು ನಿರೀಕ್ಷಿಸಿರಲಿಲ್ಲ.

'ಏ ಮೇಡಂ... ಇಪ್ಪತ್ತು ಕೋಟೀನಾ... ಜೋಕ್ ಮಾಡ್ತೀರ...' ಎಂದವನಿಗೆ 'ಜೋಕೇನಿಲ್ಲ, ನಮ್ಮ ವಸ್ತು ನಿಮ್ಗೆ ಹೇಗೆ ಬೇಡ್ವೋ, ನಿಮ್ದೂ ಹಾಗೇನೇ. ಅಷ್ಟಕ್ಕೂ ನಿಮ್ಮ ವಸ್ತು ನೀವು ತಗೊಳ್ಳಿ ಅಂತ ನಾವ್ಯಾಕೆ ನಿಮ್ಮನ್ನು ದಮ್ಮಯ್ಯ ಗುಡ್ಡೆ ಹಾಕ್ಬೇಕು? ಬೇಕಾದ್ರೆ ತಗೊಳ್ಳಿ, ಇಲ್ಲಾಂದ್ರೆ ನಮ್ಮ ಸೈಟೇ ಸ್ವಲ್ಪ ಎತ್ತರ ಆಗುತ್ತೆ ಅಷ್ಟೆ' ಅಂದವಳು ಜೊತೆಗೆ 'ಅಳೀತಾ ಇದ್ದೀವಿ ಸರ್... ನಮ್ಮಡೇ ಏನಾದ್ರೂ ನಿಮ್ಮ ಮನೆ ಬಂದಿದೆ ಅಂದ್ರೆ ಅದನ್ನೂ ಜೆಸಿಬಿ ಬೀಳಿಸುತ್ತೆ ಈಗ. ಅರ್ಧ ಗಂಟೇಲಿ ಕರೆಸ್ತೀನಿ... ವೀಕೆಂಡಲ್ವಾ? ಆರಾಮಾಗಿರಿ... ಸರ್' ಎಂದವಳೇ ಫೋನ್ ಕರೆಯನ್ನು ಕತ್ತರಿಸಿದಳು.

ಅದಾದ ಹತ್ತು ನಿಮಿಷಗಳಲ್ಲಿ ಸಮವಸ್ತ್ರದಲ್ಲಿದ್ದ ಪೊಲೀಸನೊಬ್ಬ ಅಲ್ಲಿಗೆ ಬಂದ. ಮೂರ್ತಿಯ ಕಾಲುಗಳು ನಡುಗಹತ್ತಿದವು. ಅವನು ಬಂದವನೇ 'ಏನು ಮೇಡಂ ಗಲಾಟೆ? ಏನ್ಸಮಾಚಾರ' ಎಂದು ಕೆಳಗಿಳಿದ.

ಇದೀಗ ಗೀತಾ ಕೆಂಡಾಮಂಡಲವಾದಳು.

'ಯಾರ್ರಿ ನೀವು? ಯಾರು ನಿಮ್ಮನ್ನು ಬರಕ್ಕೆ ಹೇಳಿದ್ದು?' ಅಂತ ಕೇಳಿದ ಜೋರಿಗೆ ಪೊಲೀಸನೂ ತಡವರಿಸಿದ. ಅಂತಹ ಧಾಟಿಯಲ್ಲಿ ಅವನನ್ನು ಮಾತಾಡಿಸ್ತಿದ್ದವರು ಬಹಳ ಕಡಿಮೆಯಿದ್ದ ಕಾರಣ ಜೋರುಮಾಡಲು ಬಂದಿದ್ದ ಅವನು ಸ್ವಲ್ಪ ನಿಧಾನಿಸಿದ.

'ಏನಿಲ್ಲ, ಮಿನಿಷ್ಟ್ರು ಬಂದಿದ್ರು... ಡ್ಯೂಟಿಯಲ್ಲಿದ್ದೆ. ಒಂಚೂರು ಸೈಟಿನತ್ರ ಹೋಗ್ಬಾ ಅಂತ ಬಾಸು ಹೇಳಿದ್ರು, ನಂಬಾಸು ಮತ್ತು ಸರ್ಕಾರ್ ಇಬ್ರೂ ಸ್ನೇಹಿತ್ರು'.

'ಓ ಹೌದಾ? ನಿಮ್ಮ ವಿಳಾಸ ಕೊಟ್ಟಿರಿ. ನಮ್ಮ ಸೈಟ್ನಲ್ಲಿ ಅಕ್ರಮ ಕಟ್ಟಡ ಕಟ್ತಿದ್ದಾರೆ ಅಂತ ಲಾಯರ್ ನೋಟೀಸ್ ಕಳಿಸ್ಬೇಕು. ಅವರು ನಿಮ್ಮ ಕೇರಿಯಲ್ಲಿರೊ ಕಾರಣ ನೀವೇ ಅದನ್ನು ಸರ್ಕಾರ್‌ಗೆ ಕೊಡೀವ್ರಂತೆ' ಅಂತ ಗೀತಾ ಕಣ್ಣು ಕೆಕ್ಕರಿಸಿ ಸೊಂಟದ ಮೇಲೆ ಕೈಯಿಟ್ಟು ನಿಂತಳು.

ಖಾಕಿ ಯೂನಿಫಾರ್ಮ್, ಕೂಗುತ್ತಿರೋ ಹೆಂಗಸನ್ನು ಕಂಡು ಜನ ಸೇರತೊಡಗಿದರು. ಒಂದಿಬ್ಬರು ಫೋನ್ ತೆಗೆದು ವಿಡಿಯೊ ತೆಗೆಯತೊಡಗಿದರು.

ಗೀತಾ ಖುದ್ದಾಗಿ ಫೋನ್ ತೆಗೆದು ಆ ಪೊಲೀಸನ ಫೋಟೊ, ಹೆಸರಿನ ಬ್ಯಾಡ್ಜ್ ಇತ್ಯಾದಿ ಚಿತ್ರ ತೆಗೆಯತೊಡಗಿದಳು. ಬಂದಿದ್ದವರಿಗೆ 'ನೋಡಿ ಸರ್, ನಮ್ ಸೈಟ್‌ನಿಂದ ಸಾಮಾನ್ ತಗೀರಪ್ಪಾ , ಅಂದ್ರೆ ಬೇರೆ ಕಡೇ ಡ್ಯೂಟಿನಲ್ಲಿದ್ದ ಪೊಲೀಸರ್ ಕಳ್ಸಿದ್ದಾರೆ. ಪಾಪ ಈ ಪೊಲೀಸಪ್ಪನ ಫೋಟೊ, ಹೆಸ್ರು ನಾಳೆ ಪೇಪರಲ್ಲಿ ಬಂದ್ರೆ ಇವ್ರ ಕೆಲ್ಸನೂ ಹೋಯ್ತು ಅಂತಾನೆ, ಯಾರ್‌ಸಾರ್ ನಿಮ್ಮ ಬಾಸು? ಹೆಸ್ರೇಳಿ, ಅವರ್ನೇ ಬರೋಕ್ ಹೇಳಿ, ಬಂದು ಬಗೆಹರಿಸ್ಲಿ. ನಮ್ಮನಮ್ ಪ್ರಾಪರ್ಟೀಲಿ ನಾವು ಕೆಲ್ಸ